**<u>ಸಾಕ್ಷಿಗೆ ದಿನಾಂಕ 02-11-2023 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು</u>**

**<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಇ.ಸಿ.ವಕೀಲರಿಂದ</u>**

ದಾವಾ ಆಸ್ತಿಯ ಸರ್ವೆ ನಂಃ 319 ಆಗಿರುತ್ತದೆ. ಸದರಿ ದಾವಾ ಆಸ್ತಿಯ ಹಿಸ್ಸಾ ನಂಬರ ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿಯ ಹಳೆಯ ಸರ್ವೆ ನಂಬರ ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿಯ ಪ್ರತಿವಾದಿಯ ಹಿರಿಯರಿಂದ ಪ್ರತಿವಾದಿಗೆ ಬಂದ ಆಸ್ತಿ ಇರುತ್ತದೆ ಎಂದರೆ ಸರಿ.

ದಾವಾ ಆಸ್ತಿಗೆ ಸಂಬಂಧಿಸಿದಂತೆ ಖರೀದಿ ಪತ್ರವು ಸುಮಾರು 42 ವರ್ಷಗಳ ಹಿಂದೆ ಆಗಿರುತ್ತದೆ. ದಿನಾಂಕ ನನಗೆ ಗೊತ್ತಿರುವುದಿಲ್ಲ.

ನನಗೆ ಈಗ 45 ವರ್ಷ ಆಗಿರುತ್ತದೆ. ಖರೀದಿ ಪತ್ರದ ಸಂಧರ್ಭದಲ್ಲಿ ನಾನು 5 ವರ್ಷದವನು ಇದ್ದೇನು ಎಂದರೆ ಸರಿ. ಖರೀದಿ ಪತ್ರದಲ್ಲಿ ನನ್ನ ಸಹಿ ಇರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು, ನನ್ನ ತಂದೆ ಸದರಿ ಖರೀದಿ ಪತ್ರಕ್ಕೆ ಸಹಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

ದಾವಾ ಆಸ್ತಿಯ ಪೂರ್ವಕ್ಕೆ ಚೆಕ್ ಡ್ಯಾಂ ಇದ್ದು, ಪಶ್ಚಿಮಕ್ಕೆ ಚಂದಪ್ಪ ಇವರ ಜಮೀನು ಇದ್ದು, ಉತ್ತರಕ್ಕೆ ಗಾಣಿಗೇರರವರ ಹೊಲ ಇರುತ್ತದೆ ಮತ್ತು ದಕ್ಷಿಣಕ್ಕೆ ನಮ್ಮ ಜಮೀನು ಇರುತ್ತದೆ.

ಪ್ರತಿವಾದಿಯು ಕಲಬುರಗಿಯ ನೀರಾವರಿ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದನು ಎಂದರೆ ಸರಿ. ಖರೀದಿ ಪತ್ರಕ್ಕೆ ಪ್ರತಿವಾದಿಯಾಗಲೀ, ಆತನ ಹೆಂಡತಿಯಾಗಲೀ ಸಹಿ ಮಾಡಿರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ.

ಪ್ರತಿವಾದಿಯು ಆತನ ತಂದೆ ತಾಯಿಗೆ ಒಬ್ಬನೇ ಮಗ ಎಂದರೆ ಸರಿ. ಪ್ರತಿವಾದಿಯು ತಾನು ಕರ್ತವ್ಯಕ್ಕಾಗಿ ಬೇರೆ ಕಡೆ ಹೋದಾಗ, ವಾದಿಯು ಒಂದು ಸುಳ್ಳು ಖರೀದಿ ಪತ್ರವನ್ನು ಸೃಷ್ಟಿಸಿಕೊಂಡಿರುತ್ತಾನೆ ಎಂದರೆ ಸರಿಯಲ್ಲ.

ಖರೀದಿ ಪತ್ರದ ಸಂಧರ್ಬದಲ್ಲಿ ಪ್ರತಿವಾದಿಯ ತಂದೆ ಜೀವಂತ ಇರಲಿಲ್ಲ ಎಂದರೆ ಸರಿ. ವಾದಿಯು ನನಗೆ ಪರಿಚಯಸ್ಥಳಾಗಿದ್ದು, ಆಕೆಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೂ ಮತ್ತು ವಾದಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

ಖರೀದಿ ಪತ್ರದ ವ್ಯವಹಾರದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಚಿತ್ತಾಪೂರ.

**<u>ಸಾಕ್ಷಿಗೆ ದಿನಾಂಕ 02-11-2023 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು</u>**

**<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಇ.ಸಿ.ವಕೀಲರಿಂದಃ</u>**

ಖರೀದಿ ಪತ್ರದ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಖರೀದಿ ಪತ್ರಕ್ಕೆ ನಾನು ಸಾಕ್ಷಿಯಾಗಿ ಸಹಿ ಮಾಡಿರುವುದಿಲ್ಲ. ಸಾಕ್ಷಿಯು ಮುಂದುವರೆದು, ಖರೀದಿ ಪತ್ರ ಮಾಡುವ ಕಾಲಕ್ಕೆ ನನ್ನ ತಂದೆ ಜೀವಿತರಾಗಿದ್ದರು.

ದಾವಾ ಆಸ್ತಿಯು ಪ್ರತಿವಾದಿಯ ಪಿತ್ರಾರ್ಜಿತ ಆಸ್ತಿಯಾಗಿತ್ತು ಎಂದರೆ ಸರಿ. ಪ್ರತಿವಾದಿಯ ಪರಿಚಯ ನನಗೆ ಇರುತ್ತದೆ. ಪ್ರತಿವಾದಿಯು ಈಗ ಯಾದಗಿರಿಯಲ್ಲಿ ಇರುತ್ತಾನೆ ಎಂದರೆ ಸರಿ. ಪ್ರತಿವಾದಿಯು ಖರೀದಿ ಪತ್ರಕ್ಕೆ ಸಹಿ ಮಾಡಿರುತ್ತಾನೋ ಅಥವಾ ಇಲ್ಲವೋ ಎಂದು ನನಗೆ ಗೊತ್ತಿರುವುದಿಲ್ಲ.

ದಾವಾ ಆಸ್ತಿಯ ವಿಸ್ತೀರ್ಣ 03 ಎಕರೆ 19 ಗುಂಟೆ ಇರುತ್ತದೆ. ಖರೀದಿ ಪತ್ರ ಆಗುವ ಸಂಧರ್ಭದಲ್ಲಿ ಪ್ರತಿವಾದಿಯ ತಂದೆ ಜೀವಂತ ಆಗಿರಲಿಲ್ಲ ಎಂದರೆ ಸರಿಯಲ್ಲ. ನಾನು ಖರೀದಿ ಪತ್ರವನ್ನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಖರೀದಿ ಪತ್ರದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿಯ ಚೆಕ್ ಬಂದಿ ನನಗೆ ನಿಖರವಾಗಿ ಹೇಳಲು ಬರುವುದಿಲ್ಲ. ಸಾಕ್ಷಿಯು ಮುಂದುವರೆದು, ನನ್ನ ಜಮೀನು ಸರ್ವೆ ನಂಃ 320ರ ಪೂರ್ವ ದಿಕ್ಕಿನಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ನಾನು ಮತ್ತು ವಾದಿ ಒಂದೇ ಜಾತಿಗೆ ಸೇರಿದವರು ಎಂದರೆ ಸರಿ. ಈ ದಿನ ವಾದಿಯೇ ನನಗೆ ಸಾಕ್ಷಿ ನುಡಿಯುವಂತೆ ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾಳೆ ಎಂದರೆ ಸರಿ.

ವಾದಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯಗಳು ಸುಳ್ಳಾಗಿರುತ್ತವೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಚಿತ್ತಾಪೂರ.

**<u>ಸಾಕ್ಷಿಗೆ ದಿನಾಂಕ 02-11-2023 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು</u>**

**<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಇ.ಸಿ.ವಕೀಲರಿಂದಃ</u>**

ನನಗೆ ಈಗ ವಯಸ್ಸು 50 ವರ್ಷ ಆಗಿರುತ್ತದೆ. ಖರೀದಿ ಪತ್ರವು ಸುಮಾರು 40 ವರ್ಷಗಳ ಹಿಂದೆ ಆಗಿರುತ್ತದೆ. ಖರೀದಿ ಪತ್ರ ಆಗುವಾಗ ನನಗೆ 10 ವರ್ಷ ಆಗಿತ್ತು ಎಂದರೆ ಸರಿ. ಖರೀದಿ ಪತ್ರದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು, ಸದರಿ ದಾವಾ ಆಸ್ತಿಯನ್ನು ಪೋಮು ಎಂಬ ವ್ಯಕ್ತಿ ಖರೀದಿ ಮಾಡಿರುತ್ತಾನೆ ಎಂದು ನುಡಿಯುತ್ತಾರೆ.

ಪ್ರತಿವಾದಿಯ ಪರಿಚಯ ನನಗೆ ಇರುವುದಿಲ್ಲ. ನಾನು ಪ್ರತಿವಾದಿಯನ್ನು ನೋಡಿರುವುದಿಲ್ಲ. ಪ್ರತಿವಾದಿಯು ಈಗ ಎಲ್ಲಿ ವಾಸವಾಗಿರುತ್ತಾನೆ ಎಂದು ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿಯು ನಮ್ಮ ಊರಿನಲ್ಲಿ ಇರುವುದಿಲ್ಲ. ಪ್ರತಿವಾದಿಯು ಊರಿನಲ್ಲಿ ವಾಸವಾಗಿರದೇ ಇರುವ ಕಾರಣದಿಂದ ಒಂದು ಸುಳ್ಳು ಖರೀದಿ ಪತ್ರ ಆಗಿರುತ್ತದೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯ ಸರ್ವೆ ನಂಃ 319 ಆಗಿರುತ್ತದೆ. ದಾವಾ ಆಸ್ತಿಯ ವಿಸ್ತೀರ್ಣ 3 ಎಕರೆ 2 ಗುಂಟೆ ಆಗಿರುತ್ತದೆ. ನಾನು ಖರೀದಿ ಪತ್ರವನ್ನು ನೋಡಿರುವುದಿಲ್ಲ.

ದಾವಾ ಆಸ್ತಿಯ ಪೂರ್ವಕ್ಕೆ ರಾಮಜೀರವರ ಜಮೀನು, ಪಶ್ಚಿಮಕ್ಕೆ ಸಾಯಬಣ್ಣಾ ನಾಯ್ಕೋಡಿ ಇವರ ಜಮೀನು, ಉತ್ತರಕ್ಕೆ ಚಂದಪ್ಪಾ ಇವರ ಜಮೀನು ಇದ್ದು ಮತ್ತು ದಕ್ಷಿಣಕ್ಕೆ ಗಾಣಿಗೇರ ಇವರ ಜಮೀನು ಇರುತ್ತದೆ.

ನಾನು ಮತ್ತು ವಾದಿ ಒಂದೇ ಜಾತಿಗೆ ಸೇರಿದವರು ಎಂದರೆ ಸರಿ. ವಾದಿಗೆ ಸಹಾಯ ಮಾಡಲು ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಚಿತ್ತಾಪೂರ.